ಓ ಎಸ್ ನಂ.86/2024
ಪಿ.ಡಬ್ಲ್ಯೂ-1 ಗಂಗಮ್ಮ ಗಂಡ ವೀರಯ್ಯ

**(ಇಂದು ದಿನಾಂಕಃ 28-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಕೆ ಜಿ ಪಿ ವಕೀಲರಿಂದ.

ನನ್ನ ಅಜ್ಜ ಶಿವಲಿಂಗಯ್ಯರವರಿಗೆ ೫ ಜನ ಗಂಡು ಮಕ್ಕಳು ಮತ್ತು ೨ ಜನ ಹೆಣ್ಣುಮಕ್ಕಳು ಇರುತ್ತಾರೆ. ಸರ್ವೆ ನಂಬರ ೬೨ ರಲ್ಲಿ ಒಟ್ಟು ೨೭ ಎಕರೆ ೬೮ ಗುಂಟೆ ಜಮೀನು ನನ್ನ ಅಜ್ಜನಿಗೆ ಸೇರಿತ್ತು ಎಂದರೆ ಸರಿ. ಸದರಿ ಜಮೀನಿನ ಚೆಕ್ಕುಬಂದಿ ನನಗೆ ಈಗ ಹೇಳಲು ಆಗುವುದಿಲ್ಲ. ನನ್ನ ಅಜ್ಜ ಶಿವಲಿಂಗಯ್ಯರವರಿಗೆ ಮಲ್ಲಯ್ಯ ಸ್ವಾಮಿ, ನನ್ನ ತಂದೆ ಶಾಂತಯ್ಯ ಸ್ವಾಮಿ, ಈರತಯ್ಯ ಸ್ವಾಮಿ, ಶಿವಾನಂದ ಮತ್ತು ಶಶಿಕಾಂತ ಎಂಬುವವರು ೫ ಜನ ಗಂಡು ಮಕ್ಕಳಾಗಿರುತ್ತಾರೆ. ನನ್ನ ಅಜ್ಜನಿಗೆ ಶಾಂವಂತರವ್ವ ಮತ್ತು ಮಹಾನಂದರವರು ೨ ಜನ ಹೆಣ್ಣುಮಕ್ಕಳಾಗಿರುತ್ತಾರೆ. ಸರ್ವೆ ನಂಬರ ೬೨ ರ ೨೭ ಎಕರೆ ೨೮ ಗುಂಟೆ ಜಮೀನು ಪಾಲು ವಾಟ್ನಿ ಆಗದ ಜಮೀನು ಆಗಿರುತ್ತದೆ ಎಂದರೆ ಸರಿ.

೨. ನನ್ನ ೨ ಜನ ಅತ್ತೆಯಂದಿರನ್ನು ಮತ್ತು ನನ್ನ ತಂದೆಯ ಸಹೋದರರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಬೇರೆಯಾಗಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರು ಬೇರೆಯಾಗಿರುವ ಕುರಿತು ದಾಖಲೆಗಳನ್ನು ನಾನು ಹಾಜರುಪಡಿಸಿರಬಹುದು. ಸರ್ವೆ ನಂಬರ ೬೨ ಜಮೀನು ಒಟ್ಟು ಕುಟುಂಬದ ಜಮೀನು ಎಂದರೆ ಸರಿ. ಸಾಕ್ಷಿಯು ಸರ್ವೆ ನಂಬರ ೬೨ ರಲ್ಲಿ ನನ್ನ ತಂದೆ ಶಾಂತಯ್ಯ ಸ್ವಾಮಿ ಮತ್ತು ನನ್ನ ಕಾಕಗಳಾದ ಶಿವಾನಂದ ಮತ್ತು ಈರತಯ್ಯ ರವರಿಗೆ ಭಾಗ ಬಂದಿರುತ್ತದೆ ಮತ್ತು ಸರ್ವೆ ನಂಬರ ೬೧ ರಲ್ಲಿ ಉಳಿದ ನನ್ನ ೨ ಜನ ಕಾಕಂದಿರಿಗೆ ಪಾಲು ಬಂದಿರುತ್ತದೆ ಎನ್ನುತ್ತಾರೆ.

೩. ಸರ್ವೆ ನಂಬರ ದಾಖಲೆಗಳನ್ನು ನಾನು ಹಾಜರುಪಡಿಸಿದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ ೩೧ ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಮ್ಮ ತಂದೆಯ ಜಮೀನನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿರುತ್ತೇನೆ ಎನ್ನುತ್ತಾರೆ. ನನ್ನ ತಂದೆಯಂತೆ ನನ್ನ ಅತ್ತೆಯಂದಿರು ಮತ್ತು ನನ್ನ ಕಾಕಂದಿರು ಕೂಡಾ ಆಸ್ತಿಯಲ್ಲಿ ಹಕ್ಕುದಾರರು ಎಂದರೆ ಸರಿ. ಸಾಕ್ಷಿಯು ಸರ್ವೆ ನಂಬರ ೩೧ ಮತ್ತು ಸರ್ವೆ ನಂಬರ ೩೨ ರಲ್ಲಿ ಎರಡರಲ್ಲಿಯೂ ಹಕ್ಕುದಾರರಾಗಿರುತ್ತಾರೆ ಎನ್ನುತ್ತಾರೆ. ನನ್ನ ದೊಡ್ಡಪ್ಪ ಮಲ್ಲಯ್ಯರವರು ಮೊದಲು ಟೇಲರಿಂಗ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಮಲ್ಲಯ್ಯರವರು ಘತ್ತರಗಿಯಲ್ಲಿ ವಾಸವಿದ್ದರು ಎಂದರೆ ಸರಿ. ಮಲ್ಲಯ್ಯರವರು ಗುತ್ತಿಗೆದಾರ ಕೆಲಸ ಕೂಡಾ ಮಾಡುತ್ತಿದ್ದರು ಎಂದರೆ ಸರಿ.

೪. ಮಲ್ಲಯ್ಯರವರು ತಮ್ಮ ಸ್ವಂತ ಆದಾಯದಿಂದ ಸರ್ವೆ ನಂಬರ ೩೧ ರ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ೫ ಜನ ಅಣ್ಣತಮ್ಮಂದಿರು ಸೇರಿ ಸದರಿ ಜಮೀನು ಖರೀದಿಸಿರುತ್ತಾರೆ ಎನ್ನುತ್ತಾರೆ. ನನ್ನ ತಂದೆಯ ಸಹೋದರರು ಮತ್ತು ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತಿರಾ ಎಂದರೆ ಸಾಕ್ಷಿಯು ಮಾಡಿರಬಹುದು ಎನ್ನುತ್ತಾರೆ. ಸರ್ವೆ ನಂಬರ ೩೨ರಲ್ಲಿನ ಬೆಳೆದ ದವಸ-ಧಾನ್ಯಗಳನ್ನು ಮಲ್ಲಯ್ಯರವರಿಗೆ ಕೂಡಾ ಕೊಡುತ್ತಿದ್ದರು ಎಂದರೆ ಸರಿ. ಸರ್ವೆ ನಂಬರ ೩೧ ರ ಜಮೀನು ಮಲ್ಲಯ್ಯರವರ ಸ್ವಯಾರ್ಜಿತ ಆಸ್ತಿಯಾಗಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ ೩೨ ರ ಜಮೀನನ್ನು ಶಾಂತಯ್ಯ, ಈರತಯ್ಯ ಮತ್ತು ಶಿವಾನಂದರವರಿಗೆ ಸಾಲ ಸೌಲಭ್ಯಕ್ಕಾಗಿ ಅವರ ಹೆಸರಿನಲ್ಲಿ ಮಾಡಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಅದು ಅವರ ಪಾಲಿಗೆ ಬಂದಿರುತ್ತದೆ ಎನ್ನುತ್ತಾರೆ.

೫.	ಸರಕಾರಿ ಸೌಲಭ್ಯ ಪಡೆಯಲು ಮಾತ್ರ ೩ ಜನರ ಹೆಸರಿನಲ್ಲಿ ದಾವಾ ಜಮೀನು ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರ ಪಾಲಿಗೆ ಸದರಿ ಜಮೀನು ಬಂದಿದ್ದರಿಂದ ಅವರ ಹೆಸರಿನಲ್ಲಿ ಮಾಡಲಾಗಿದೆ ಎನ್ನುತ್ತಾರೆ. ದಾವಾ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆಯ ಸಮಯದಲ್ಲಿ ನನಗೆ ಬಂಗಾರ ನೀಡಿರುತ್ತಾರೆ ಎಂದರೆ ಸರಿ. ಆ ಕಾರಣ ನನಗೆ ದಾವಾ ಜಮೀನಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.